

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕದಳೀವನದಿಂದ ಕಾಶ್ಮೀರದ ಕಣಿವೆಗೆ

"ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತ ಪ್ರಮಥರ ಕರುಣದೊಳಗೆ
ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದಿರಿ
ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದಿರಿ
ಸ್ವಯವಪ್ಪ ಗಂಡಂಗೆ ಕೊಟ್ಟು
ವಿವಾಹವ ಮಾಡಿದಿರಿ
ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಚೆನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಮರಳಿ ಬಿಜಯಂಗೈವುದು, ಶರಣಾರ್ಥಿ!"

ಇದು ವೈರಾಗ್ಯನಿಧಿ ಅಕ್ಕಮಹಾದೇವಿ ಬಸವಾದಿ ಶಿವಶರಣರನ್ನು ಕುರಿತು ಹೇಳಿದ ಅತ್ಯಂತ ಭಾವಪೂರ್ಣವಾದ ವಚನ. ಸ್ತ್ರೀಹೃದಯ ಸಹಜವಾದ ಭಾವನೆಗಳಿಂದ 'ಶರಣ-ಸತಿ, ಲಿಂಗ-ಪತಿ' ಎಂಬ ಅಧ್ಯಾತ್ಮಿಕ ಸಾಧನೆಗೆಂದು ಅನುಭವಮಂಟಪದಿಂದ ಬೀಳ್ಕೊಂಡು ಕದಳೀವನದತ್ತ ಅಕ್ಕ ಪಯಣ ಬೆಳೆಸಿದ ಮನಮಿಡಿಯುವ ಸಂದರ್ಭ. ಈ ವಚನ ನಮಗೆ ನೆನಪಾಗಿದ್ದು ಮೊನ್ನೆ ದೆಹಲಿಯಲ್ಲಿ. "Vakh and Vachana – the Pearls of Wisdom" ಎಂಬ ವಿಷಯದ ಮೇಲೆ IGNCA (Indira Gandhi National Centre for the Arts) ಸಂಸ್ಥೆಯು ಎರಡು ದಿನಗಳ ಒಂದು ರಾಷ್ಟ್ರೀಯ ಸಂವಾದಗೋಷ್ಠಿಗೆ ನಮ್ಮನ್ನು ಆಹ್ವಾನಿಸಿತ್ತು. ಕಾಶ್ಮೀರದಿಂದ ಅನೇಕ ವಿದ್ವಾಂಸರು ಬಂದಿದ್ದರು. ಅವರನ್ನು ನೋಡಿದಾಗ 12ನೆಯ ಶತಮಾನದಲ್ಲಿ ಬಸವಣ್ಣನವರ ವಿಚಾರಧಾರೆಯಿಂದ ಆಕರ್ಷಿತಗೊಂಡ ಕಾಶ್ಮೀರದ ಅರಸು ಕಲ್ಯಾಣಕ್ಕೆ ಬಂದು ಕಟ್ಟಿಗೆ ಕಾಯಕವನ್ನು ಕೈಗೊಂಡಿದ್ದ ಮೋಳಿಗೆ ಮಾರಯ್ಯನ ಇತಿಹಾಸ ನೆನಪಾಗಿ ಹೃದಯ ಪುಳಕಗೊಂಡಿತು. ಅಂತಹ ಅರಸನೊಬ್ಬ ಕಾಶ್ಮೀರದಲ್ಲಿ ಇದ್ದನೇ ಎಂಬ ವಿಚಾರವಾಗಿ ಸರಿಯಾದ ಮಾಹಿತಿ ದೊರೆಯಲಿಲ್ಲವಾದರೂ 12 ಮತ್ತು 13ನೆಯ ಶತಮಾನಗಳಲ್ಲಿ ಕಾಶ್ಮೀರದಿಂದ ಕರ್ನಾಟಕಕ್ಕೆ ಅನೇಕ ಸಾರಸ್ವತ ಬ್ರಾಹ್ಮಣರು ಮತ್ತು ಶೈವವಿದ್ವಾಂಸರು ವಲಸೆಬಂದ ಸಂಗತಿಯನ್ನು ದೃಢಪಡಿಸಿದರು.

ಉತ್ತರಭಾರತೀಯರಿಗೆ ವಚನಸಾಹಿತ್ಯದ ಪರಿಚಯ ಅಷ್ಟಾಗಿ ಇಲ್ಲ. ಆದರೆ ಕಾಶ್ಮೀರದಿಂದ ದೆಹಲಿಯ ಸಂವಾದಗೋಷ್ಠಿಗೆ ಬಂದಿದ್ದ ಪಂಡಿತರಿಗೆಲ್ಲರಿಗೂ ಬಸವಣ್ಣನವರ ಮತ್ತು ಅಕ್ಕಮಹಾದೇವಿಯ ವಚನಗಳ ಸ್ಥೂಲ ಪರಿಚಯವಿತ್ತು. ಕಾಶ್ಮೀರಿ ಭಾಷೆಯಲ್ಲಿರುವ 'ವಾಕ್' ಸಾಹಿತ್ಯದ ಪರಿಚಯ ಬಹುತೇಕ ಕನ್ನಡಿಗರಿಗೆ ಇಲ್ಲ. ಕನ್ನಡನಾಡಿನಲ್ಲಿ 'ವಚನಗಳು' ಹೇಗೆ ಜನರ ಬಾಯಲ್ಲಿ ಇವೆಯೋ ಹಾಗೆ ಕಾಶ್ಮೀರದ ಪ್ರತಿಯೊಬ್ಬ ಹೆಣ್ಣುಗಂಡಿನ ನಾಲಿಗೆಯ ತುದಿಯಲ್ಲಿ 'ವಾಕ್' ಇರುವುದನ್ನು ಮನಗಾಣಬಹುದಾಗಿದೆ. 'ವಾಕ್' ಎಂದರೆ ಕೇವಲ ನುಡಿಯಲ್ಲ, ಕಾಶ್ಮೀರಿಭಾಷೆಯಲ್ಲಿ ಅದೊಂದು ಸಾಹಿತ್ಯಪ್ರಕಾರ; ಕನ್ನಡದಲ್ಲಿ ವಚನಸಾಹಿತ್ಯ ಹೇಗೋ ಹಾಗೆ. ಅದನ್ನು 'ಲಲ್‌ವಾಕ್' ಎಂದೂ ಕರೆಯುತ್ತಾರೆ. ಅದಕ್ಕೆ ಕಾರಣ 14ನೆಯ ಶತಮಾನದ ಅನುಭಾವಿ ಸಂತಳಾದ ಲಲ್ಲೇಶ್ವರೀ. ಕಾಶ್ಮೀರಿ ಸಾಹಿತ್ಯದಲ್ಲಿ ಲಲ್ಲೇಶ್ವರಿಯ ನುಡಿಗಳು ಕನ್ನಡದ ವಚನಗಳಂತೆ ಹೊಸ ಸಾಹಿತ್ಯಪ್ರಕಾರವಾಗಿ ರೂಪುಗೊಂಡಿವೆ. ಯಾವುದೇ ಜಾತಿ-ಮತ ಮತ್ತು ಲಿಂಗ ಭೇದವಿಲ್ಲದೆ ಕೇವಲ ಪಾರಮಾರ್ಥಿಕ ಚಿಂತನೆಯಿಂದ ಕೂಡಿದ ಆಕೆಯ ಅನುಭಾವದ ನುಡಿಗಳು ಕಾಶ್ಮೀರಿಸಾಹಿತ್ಯಕ್ಕೆ ಒಂದು ಭದ್ರ ಬುನಾದಿಯನ್ನು ಒದಗಿಸಿಕೊಟ್ಟಿವೆ. ವಾಕ್‌ಸಾಹಿತ್ಯದ ಆದ್ಯಪ್ರವರ್ತಕಳಾದ ಲಲ್ಲೇಶ್ವರಿಯನ್ನು ಕಾಶ್ಮೀರದ ಜನರು ಶಿವಯೋಗಿನಿಯೆಂದೂ ಪ್ರೀತಿಯಿಂದ ಲಲ್-ದೇಡ್ (ಮಹಾತಾಯಿ ಲಲ್ಲಾ) ಎಂದೂ ಕರೆಯುತ್ತಾರೆ. ಶೈವಸಂಪ್ರದಾಯದ ಸಂತಳಾಗಿದ್ದರೂ ಮುಸ್ಲಿಮರ ಅಪಾರ ಗೌರವಕ್ಕೂ ಪಾತ್ರಳಾಗಿದ್ದಳು. ಆ ಕಾಲದ ಅನೇಕ ಸೂಫೀ ಸಂತರೊಂದಿಗೆ ಆಕೆ ನಡೆಸಿದ ಸಂವಾದ ಪ್ರಾಚೀನ ಪರ್ಷಿಯನ್ ಗ್ರಂಥಗಳಲ್ಲಿ (ನೂರ್‌ನಾಮ, ಋಷಿನಾಮ) ದಾಖಲಾಗಿದೆ. ಆಕೆಯ ಸಮಕಾಲೀನರಾದ ಶೇಖ್ ಬಾಬಾ ನಸರುದ್ದೀನ್ ಮತ್ತು ನಂತರದ ದಾರ್ಶನಿಕರಾದ ಶೇಖ್ ನೂರುದ್ದೀನ್ ಮೊದಲಾದವರು ಈ ವಾಕ್‌ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಕಾಶ್ಮೀರಿ 'ವಾಕ್' ಮತ್ತು ಕನ್ನಡದ 'ವಚನ' ಒಂದೇ ಸಂಸ್ಕೃತ ಧಾತುವಿನಿಂದ (ವಚ್) ನಿಷ್ಪನ್ನಗೊಂಡಿದ್ದು ಎರಡೂ ಸಾಹಿತ್ಯಗಳ ಮಧ್ಯೆ ಇರುವ ಸಾಮ್ಯತೆ ತುಂಬಾ ಗಮನಾರ್ಹ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಲಲ್ಲೇಶ್ವರೀ ಮತ್ತು ಅಕ್ಕಮಹಾದೇವಿಯ ವೈಯಕ್ತಿಕ ಜೀವನದಲ್ಲಿ ಕಂಡುಬರುವ ಸಾಮ್ಯತೆ. ಲಲ್ಲೇಶ್ವರಿಯನ್ನು ಕಾಶ್ಮೀರದ ಅಕ್ಕಮಹಾದೇವಿಯೆಂದು ನಿಃಸಂದೇಹವಾಗಿ ಹೇಳಬಹುದು.

- 2 -

ಕಾಶ್ಮೀರದಲ್ಲಿ ಪ್ರಚಲಿತದಲ್ಲಿರುವ ಲಲ್ಲೇಶ್ವರಿಯ ಅನೇಕ ಚಿತ್ರಗಳು ಅಕ್ಕಮಹಾದೇವಿಯ ಚಿತ್ರಗಳೊಂದಿಗೆ ಹೋಲುತ್ತವೆ. ಕಲ್ಯಾಣದ ಶಿವಶರಣರಿಂದ ಬೀಳ್ಕೊಂಡು ಶ್ರೀಶೈಲಕ್ಕೆ ತೆರಳಿ ಕದಳೀವನದಲ್ಲಿ ಧ್ಯಾನಸ್ಥಳಾಗಿ ಬಯಲಾದ ಅಕ್ಕಮಹಾದೇವಿಯೇ ಶಿವನ ಲೀಲೆಯಿಂದ ಕಾಶ್ಮೀರದ ಕಣಿವೆಯಲ್ಲಿ ಲಲ್ಲೇಶ್ವರಿಯಾಗಿ ಮತ್ತೆ ಮರುಜನ್ಮ ಪಡೆದು ಈ ಭಾಗದ ಜನರಿಗೆ ಮುಕ್ತಿಯ ಪಥ ತೋರಿದಳೇನೋ ಎನಿಸುತ್ತದೆ. ಗೋಷ್ಠಿಯ ಸಂಜೆ ಕಾಶ್ಮೀರದ ಶ್ರೀಮತಿ ಸುಷಮಾ ಕಲಾತಂಡದವರು ಮತ್ತು ಮೈಸೂರಿನ ವಸುಂಧರಾ ದೊರೆಸ್ವಾಮಿ ಭರತನಾಟ್ಯ ಕಲಾತಂಡದವರು ಪ್ರಸ್ತುತಪಡಿಸಿದ ನೃತ್ಯರೂಪಕಗಳು ಅಕ್ಕಮಹಾದೇವಿ ಮತ್ತು ಲಲ್ಲೇಶ್ವರಿಯನ್ನು ಕಲೆಯ ಕನ್ನಡಿಯಲ್ಲಿ ಬಿಂಬ ಪ್ರತಿಬಿಂಬವಾಗಿ ಒಂದಾಗಿಸಿದ್ದವು.

ಲಲ್ಲೇಶ್ವರಿ ಹುಟ್ಟಿದ್ದು ಕ್ರಿ.ಶ 1355 ರಲ್ಲಿ. ಶ್ರೀನಗರಕ್ಕೆ ಸುಮಾರು 5 ಮೈಲಿ ದೂರದಲ್ಲಿರುವ ಒಂದು ಹಳ್ಳಿಯಲ್ಲಿ. ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗಿತ್ತು. ಅತ್ತೆ ತುಂಬಾ ಕಿರುಕುಳ ಕೊಡುತ್ತಿದ್ದಳು. ಊಟದ ತಟ್ಟೆಯಲ್ಲಿ ನೆಪಮಾತ್ರಕ್ಕೆ ಅನ್ನ ಬಡಿಸಿ ಕಣ್ಣಿಗೆ ಕಾಣದಂತೆ ಕಲ್ಲನ್ನು ಹಾಕುತ್ತಿದ್ದಳು. ಲಲ್ಲಾ ಮಾತ್ರ ಅತ್ತೆಯ ವಿರುದ್ಧ ಸೊಲ್ಲೆತ್ತದೆ ತಾಳ್ಮೆಯಿಂದ ವರ್ತಿಸುತ್ತಿದ್ದಳು. ಮಾವ ಒಳ್ಳೆಯವನಿದ್ದ. ಅವನಿಗೆ ವಿಷಯ ಹೇಗೋ ತಿಳಿದು ಹೆಂಡತಿಯನ್ನು ಗದರಿಸಿದ. ಇದರಿಂದ ಸಿಟ್ಟಿಗೆದ್ದ ಅತ್ತೆಯು ಸೊಸೆಗೆ ಮತ್ತಷ್ಟೂ ಕಿರುಕುಳ ಕೊಡಲಾರಂಭಿಸಿದಳು. ಮಗನಿಗೆ ಇಲ್ಲಸಲ್ಲದ ಚಾಡಿ ಹೇಳಿ ಆಕೆಯ ಸಾಂಸಾರಿಕ ಜೀವನವನ್ನು ನರಕಸದೃಶವನ್ನಾಗಿ ಮಾಡಿದಳು. ಇದರಿಂದ ಬೇಸತ್ತ ಸಾಧ್ವಿ ಲಲ್ಲೇಶ್ವರೀ ಹುಚ್ಚಿಯಂತೆ ಬೆತ್ತಲೆಯಾಗಿ ಮನೆಯಿಂದ ಹೊರನಡೆದಳು. ಸ್ವತಃ ತನ್ನ ಒಂದು ವಾಕ್‌ನಲ್ಲಿ ಆಕೆಯೇ ಹೇಳಿಕೊಂಡಿರುವಂತೆ 'ಶರೀರ ಬತ್ತಲೆಯಾಗಿದ್ದರೂ ಜ್ಞಾನದ ಉಡುಗೆಯನ್ನು ತೊಟ್ಟಿದ್ದಳು!'. ಸಾಂಸಾರಿಕ ಜೀವನದ ಕಹಿ ಘಟನಾವಳಿಗಳನ್ನು ಹೀಗಳೆಯದೆ ಆಧ್ಯಾತ್ಮಿಕ ದಾರಿಯನ್ನು ತುಳಿಯಲು ಅವು ಹೇಗೆ ತನಗೆ ಸಹಾಯಕವಾದವು ಎಂಬುದನ್ನು ಲಲ್ಲೇಶ್ವರೀ ತುಂಬಾ ಮನೋಜ್ಞವಾಗಿ ಹೀಗೆ ವರ್ಣಿಸುತ್ತಾಳೆ:

ನಾನೊಂದು ಸುಂದರ ಹತ್ತಿಯ ಹೂವಾಗಿ ಅರಳಬಯಸಿದ್ದೆ
ನೂಲಾಗಲು ರಾಟೆಯಲಿ ತಿರುಗಿದ ಸುತ್ತುಗಳೆಷ್ಟೋ
ಬಟ್ಟೆಯಾಗಲು ನೇಕಾರಳಿಂದ ತಿಂದ ಒದೆತಗಳೆಷ್ಟೋ
ಹೆಡೆಮುರಿ ಕತ್ತರಿಸಿದನು ದರ್ಜಿ ಮುಲಾಜಿಲ್ಲದೆ
ಸೆಳೆದನು ಮಡಿವಾಳನೆನ್ನನು ಒರಟು ಬಂಡೆಯ ಮೇಲೆ
ಶಿವನ ದಾರಿಯಲಿ ಅಡಿಯಿಟ್ಟಳಾಗ ಲಲ್ಲಾ!

ಶಿವನ ಹೆದ್ದಾರಿಯಲಿ ಮುಂದೆ ಬಂದೆ ನಾನು
ದಾರಿ ಇನ್ನೂ ಮುಗಿದಿಲ್ಲ,
ಇರುವೆ ನಾ ನಡುನೀರಿನಲಿ
ಸಂಜೆಗತ್ತಲು ಆವರಿಸುತಿದೆ!
ಚಿಕ್ಕಾಸೂ ಇಲ್ಲ ನನ್ನ ಕೈಯಲ್ಲಿ
ಏನ ಕೊಡಲಿ ಅಂಬಿಗನಿಗೆ,
ದಾಂಟಿಸಲು ಭವದ ದೋಣಿಯನು ಆ ದಂಡೆಗೆ!

(ಅಕ್ಕಮಹಾದೇವಿಯ ವಚನದಲ್ಲಿ ಇದೇ ತುಡಿತ ಇರುವುದನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು:

ಅಂಬಿಗಾ ನಾನಿನ್ನ ನಂಬಿದೆ
ಅಂಬಾರಮಣ ನಿನ್ನ ನಂಬಿದೆ

7.3.2013

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑